**OS.No.**23/2023
**ಪಿ ಡಬ್ಲ್ಯೂ: 03**

**ದಿ: 17-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 1 ರಿಂದ 12 ನೇ ಪ್ರತಿವಾದಿ ಪರ ಶ್ರೀ.ಎಸ್.ಎಸ್ ವಕೀಲರಿಂದ**

ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಈ ದಾವೆಯನ್ನು ಯಾರು ಯಾರ ವಿರುದ್ದ ದಾಖಲಿಸಿದ್ದಾರೆ ಎಂದು ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ನಾನು ಈ ದಾವೆಯಲ್ಲಿ 14 ನೇ ಪ್ರತಿವಾದಿ ಇರುತ್ತೇನೆ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು 14 ನೇ ಪ್ರತಿವಾದಿ ಇರುತ್ತೇನೆ ಎಂದು ಹೇಳಿಲ್ಲ ಎಂದರೆ ಸರಿ. ಆ ರೀತಿ ನಮೂದು ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ವಾದಿಯು ಈ ದಾವೆಯನ್ನು ದಾಖಲಿಸಿದ ನಂತರ ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿತ್ತು ಎಂದರೆ ಸರಿ. ನಾನು ಈ ದಾವೆಯಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿಲ್ಲ ಎಂದರೆ ಸರಿ. ವಾದಿಯು ಯಾವ ಉದ್ದೇಶಕ್ಕೆ ಈ ದಾವೆಯನ್ನು ದಾಖಲಿಸಿದ್ದಾರೆಂದು ನನಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ. ವಾದಿಯು ಯಾವೆಲ್ಲಾ ಆಸ್ತಿಗಳ ಮೇಲೆ ಈ ದಾವೆಯನ್ನು ದಾಖಲಿಸಿದ್ದಾರೆಂದು ನನಗೆ ಮಾಹಿತಿ ಇರುತ್ತದೆ ಎಂದರೆ ಸರಿ. ದಿ:12-09-2002 ರಲ್ಲಿ ಆದ ವಿಭಾಗ ಪತ್ರದಲ್ಲಿ ದಾವಾದ ಅನುಸೂಚಿ-1 ರಲ್ಲಿ 33 ½ ಗುಂಟೆ, ಅನುಸೂಚಿ-2 ರಲ್ಲಿ 36 ಗುಂಟೆ ವಾದಿಯ ತಂದೆಯ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿ. ಸದರಿ ಪಾಲು ವಿಭಾಗ ಪತ್ರದ ಪ್ರಕಾರ ವಾದಿಯ ತಂದೆಯ ಹಿಸ್ಸೆಗೆ ಹೋದ ಜಮೀನುಗಳಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ಸದರಿ ಪಾಲುವಿಭಾಗ ಪತ್ರದಲ್ಲಿ ನಮ್ಮ ತಂದೆಯವರಿಗೂ ಸಹ ಪಾಲು ನೀಡಿದ್ದಾರೆ ಎಂದರೆ ಸರಿ. ದಾವಾ ಅನುಸೂಚಿ-1 ರಿಂದ 3 ರಲ್ಲಿ ತಲಾ 1 ಪಾಲು ನಮ್ಮ ತಂದೆಯವರಿಗೆ ಬಂದಿರುತ್ತದೆ ಎಂದರೆ ಸರಿ. ದಾವಾ ಅನುಸೂಚಿ-1 ರಲ್ಲಿ ನಮ್ಮ ತಂದೆಗೆ 1 ಎಕರೆ 24 ½ ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ವಾದಿಯ ತಂದೆಗೆ ಬಂದ ದಾವಾ ಅನುಸೂಚಿ-1 ರ ಪಕ್ಕದಲ್ಲಿಯೇ ನಮ್ಮ ತಂದೆಯವರ ಪಾಲಿಗೆ ಬಂದ ಜಮೀನು ಇರುತ್ತದೆ ಎಂದರೆ ಸರಿ. ದಾವಾ ಅನುಸೂಚಿ-1 ರಲ್ಲಿ ನಮ್ಮ ತಂದೆಗೆ ಬಂದ ಪಾಲಿನಲ್ಲಿ ಅರ್ಧ ಭಾಗವನ್ನು ಮಲ್ಲಿಕಾರ್ಜುನ್ ಎರೇಹಳ್ಳಿ ಎನ್ನುವವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸದರಿ ಮಲ್ಲಿಕಾರ್ಜುನ್ ಎರೇಹಳ್ಳಿ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದಾರೋ ಇಲ್ಲವೋ ನನಗೆ ಮಾಹಿತಿ ಇಲ್ಲ. ಮಲ್ಲಿಕಾರ್ಜುನ್ ಎರೇಹಳ್ಳಿ ರವರ ಹೆಸರಿಗೆ ನಾವು ಮಾರಾಟ ಮಾಡಿದ ಜಮೀನು ಖಾತೆ ಆಗಿರುತ್ತದೆ ಎಂದರೆ ಸರಿ. ನಮ್ಮ

ತಂದೆಗೆ ನಾನು, ಹಾಲಪ್ಪ, ರಾಜಶೇಖರಪ್ಪ ಮತ್ತು ಶಿವಕುಮಾರ್ ಅಂತಾ 4 ಜನ ಮಕ್ಕಳು ಎಂದರೆ ಸರಿ. ದಿಃ 12-09-2002 ರ ಪಾಲುವಿಭಾಗ ಪತ್ರದಲ್ಲಿ ನಮ್ಮ ತಂದೆಯ ಹಿಸ್ಸೆಗೆ ಬಂದ ಜಮೀನುಗಳಿಗೆ ಸಂಬಂಧಿಸಿದಂತೆ ನಾವು 4 ಜನ ಮಕ್ಕಳು ಪಾಲುವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಾವು ಪಾಲುವಿಭಾಗ ಮಾಡಿಕೊಂಡ ಪತ್ರವನ್ನು ವಾದಿಯು ನ್ಯಾಯಾಲಯಕ್ಕೆ ಹಾಜರಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಪಾಲು ವಿಭಾಗ ಪತ್ರ ವಾದಿಗೆ ಬಂಧನಕಾರಿ ಆಗುವುದಿಲ್ಲ ಎಂದು ದಾವೆಯಲ್ಲಿ ಹೇಳಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. 2003 ರಲ್ಲಿ ನಾವು 4 ಜನ ಅಣ್ಣತಮ್ಮಂದಿರು ಪಾಲುವಿಭಾಗ ಮಾಡಿಕೊಂಡಿರುತ್ತೇವೆ. ನಾವು 4 ಜನ ಅಣ್ಣತಮ್ಮಂದಿರುವ ಪಾಲುವಿಭಾಗ ಮಾಡಿಕೊಂಡ ನಂತರ ನಮ್ಮ ನಮ್ಮ ಹೆಸರಿಗೆಖಾತೆ ಆಗಿರುತ್ತವೆ ಎಂದರೆ ಸರಿ. ನಮ್ಮ ಹಿಸ್ಸೆಗೆ ಬಂದ ಆಸ್ತಿಯನ್ನು ಎರೇಹಳ್ಳಿ ಮಲ್ಲಿಕಾರ್ಜುನ್ ರವರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ.

ನನ್ನನ್ನು ನ್ಯಾಯಾಲಯಕ್ಕೆ ಬರುವಂತೆ 5ನೇ ವಾದಿ ಕರೆದುಕೊಂಡು ಬಂದಿರುತ್ತಾರೆ. ನಿಪಿ 17 ರಲ್ಲಿ ನನ್ನ ತಂದೆಯ ಸಹಿ ಇರುತ್ತದೆ ಎಂದರೆ ಸರಿ. ದಾವಾ ಅನುಸೂಚಿ-4 ನಮ್ಮ ಒಟ್ಟು ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ-4 ಕ್ಕೆ ಸಂಬಂಧಿಸಿದಂತೆ ವಾದಿಯು ಯಾವುದೇ ದಾಖಲೆಯನ್ನು ಹಾಜರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ-4 ಆಸ್ತಿಯು 1, 2 ಮತ್ತು 4 ನೇ ಪ್ರತಿವಾದಿಯರ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ-4 ಆಸ್ತಿ ಯಲ್ಲಿ ವಾದಿಯರಿಗೆ ಮತ್ತು ನಮಗೆ ಯಾವುದೇ ಹಕ್ಕು ವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಸದರಿ ಆಸ್ತಿಯಲ್ಲಿ ನಮಗೆಲ್ಲಾ ಹಕ್ಕು ವ ಅಧಿಕಾರ ಇದ್ದಿದ್ದರೆ ಸದರಿ ಆಸ್ತಿಯನ್ನೂ ಸಹ ದಿಃ12-09-2002 ರ ಪಾಲುವಿಭಾಗ ಪತ್ರದಲ್ಲಿ ಸೇರಿಸುತ್ತಿದ್ದು ಆ ರೀತಿ ಅಧಿಕಾರ ಇಲ್ಲದ ಕಾರಣ ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ-4 ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ದಾವಾ ಅನುಸೂಚಿ-4 ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಎಂದು ಈಗ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಈಗಾಗಲೇ ಕಾಲಮಿತಿ ಅವಧಿ ಮುಕ್ತಾಯಗೊಂಡಿರುತ್ತದೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ 14ನೇ ಪ್ರತಿವಾದಿ ಇರುವ ಕಾರಣ ನನ್ನ ವಿರುದ್ದ ಏಕಪಕ್ಷೀಯ ಆದೇಶ ಆಗಿರುತ್ತದೆಯೋ ಇಲ್ಲವೋ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಅನುಸೂಚಿ-4 ಆಸ್ತಿಯು 1, 2 ಮತ್ತು 4 ನೇ ಪ್ರತಿವಾದಿಯರ ಆಸ್ತಿ ಇರುವುದರಿಂದ ಸದರಿ ಆಸ್ತಿಯು ಪಾಲುವಿಭಾಗಕ್ಕೆ

ಬರಲು ಲಭ್ಯ ಇಲ್ಲ ಎಂದರೆ ಸರಿಯಲ್ಲ. ನಾನು ವಾದಿಯರ ಮಾತನ್ನು ಕೇಳಿ ಈ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಎರೇಹಳ್ಳಿ ಮಲ್ಲಿಕಾರ್ಜುನ್ ರವರಿಗೆ ಜಮೀನು ಮಾರಾಟ ಮಾಡಿರುವ ವಿಷಯವನ್ನು ಹೇಳಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.